1305 (1651) ಶ್ರೀ ಕೃಷ್ಣ ಪಾಲೇಮಾರ್ ಜೆ.(ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಸಮಗ್ರ ಅಭಿವೃದ್ಧಿ ಯೋಜನೆ (ಸಿ.ಡಿ.ಪಿ) ಕುರಿತಾದ ವಿವರಗಳೇನು;

ಆ) ಈ ಯೋಜನೆಯಡಿಯಲ್ಲಿ ವಸತಿ ಸಮಸ್ಯೆ ನಿವಾರಣೆಗಾಗಿ ಸರ್ಕಾರದ ಯೋಜನೆಗಳೇನು?

ಇ) ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ಇಂಟಗ್ರೇಟೆಡ್ ಟೌನ್‌ಶಿಪ್ ನಿರ್ಮಾಣದಲ್ಲಿನ ವಿಶೇಷತೆಗಳೇನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿದ ಪರಿಷ್ಕೃತ ಮಾಸ್ಟರ್ ಪ್ಲಾನ್ 2015ಕ್ಕೆ ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 540 ಬೆಂ,ಸೇ 2004. ದಿನಾಂಕ: 25–06–2007ರಲ್ಲಿ ಅನುಮೋದನೆ ನೀಡಿರುವ ಮಾಸ್ಟರ್ ಪ್ಲಾನ್ 2015 ರಲ್ಲಿನ ವಿವರಗಳು ಕೆಳಕಂಡಂತಿರುತ್ತವೆ.

ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ 1219.50 ಚ.ಕಿ.ಮೀ.

1) ನಾಗರೀಕರಣಕ್ಕೆ ಪರಿಗಣಿಸಿದ ವಿಸ್ತೀರ್ಣ 800 ಚ.ಕಿ.ಮೀ.
2) ವ್ಯವಸಾಯ ವಲಯ (ಹಸಿರುಪಟ್ಟಿ) 419.50 ಚ.ಕಿ.ಮೀ.

ವಿವರಗಳು	ವಿಸ್ತೀರ್ಣ ಚ.ಕಿ.ಮೀ	ಶೇ,%
1) ವಸತಿಗಾಗಿ		
1. 1 ವಸತಿ (ಮೈನ್)	338.41	42.3
1. 2 ವಸತಿ (ಮಿಕ್ಸೆಡ್)	55.94	6.99
2) ವಾಣಿಜ್ಯ	34.6	4.32
3) ಕೈಗಾರಿಕೆ		
3. 1 ಕೈಗಾರಿಕೆ (ಸಾಮಾನ್ಯ)	39.78	4.97
3. 2 ಕೈಗಾರಿಕೆ (ಹೈಟೆಕ್)	47.25	5.91
4) ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ	39.13	4.89

5) ಸಾರಿಗೆ ಮತ್ತು ಸಂಪರ್ಕ	114.16	14.27
6) ಸಾರ್ವಜನಿಕ ಉಪಯೋಗ	11.53	1.44
7) ಉದ್ಯಾನವನ ಮತ್ತು ಬಯಲು ಜಾಗ	90.69	11.34
8) ವರ್ಗೀಕರಿಸಿದ ಪ್ರದೇಶ	28.52	3.56
9) ವ್ಯವಸಾಯ ವಲಯ ಜಲಾವೃತ ಪ್ರದೇಶ (ಹಸಿರುಪಟ್ಟಿ)	419.95	–
ಒಟ್ಟು	**1219.50**	**100**

ಆ) ನಗರದ ಪೂರ್ವಭಾಗದ ಹೊಸೂರು ರಸ್ತೆ ಮತ್ತು ವರ್ತೂರು ಮಧ್ಯ ಭಾಗದಲ್ಲಿ ಹಾಗೂ ನಗರದ ಪಶ್ಚಿಮ ಭಾಗದಲ್ಲಿ ಜಮೀನುಗಳು ಲಭ್ಯವಿರುವುದನ್ನು ಗಮನಿಸಿ ಮಾಸ್ಟರ್ ಪ್ಲಾನ್ 2015ರಲ್ಲಿ ವಸತಿ ಬಡಾವಣೆ ಗಳಿಗಾಗಿ ಮತ್ತು ಬಜೆಟ್ ಹೌಸಿಂಗ್‌ಗಾಗಿ ಅವಕಾಶಗಳನ್ನು ಕಲ್ಪಿಸಲಾಗಿದೆ.

ಇ) ಬೆಂಗಳೂರು ನಗರದ ಹೊರವಲಯಕ್ಕೆ ಹೊಂದಿಕೊಂಡಂತೆ ಈಗಾಗಲೇ ಸಾಕಷ್ಟು ಸಂಸ್ಥೆಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ವಾಣಿಜ್ಯ/ಕೈಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ, ಸದರಿ ಪ್ರದೇಶ ಗಳಲ್ಲಿ ಸೂಕ್ತ ವಸತಿ ಪ್ರದೇಶಗಳನ್ನು ಕಲ್ಪಿಸದೇ ಇರುವುದರಿಂದ ಅಲ್ಲಿ ಕೆಲಸ ಮಾಡುವ ನೌಕರರು ನಗರ ವಸತಿ ಪ್ರದೇಶಗಳಿಂದ ಕೆಲಸ ನಿರ್ವಹಿಸುತ್ತಿರುವ ಪ್ರದೇಶಗಳನ್ನು ತಲುಪಲು ರಸ್ತೆಯಲ್ಲಿ ವಾಹನ ದಟ್ಟನೆ ಹೆಚ್ಚಾಗಿರುವುದರಿಂದ ಹೆಚ್ಚಿನ ಕಾಲ ವ್ಯಯವಾಗುತ್ತದೆ. ಇನ್ನೂ ಮುಂದೆ ಯಾವುದೇ ಖಾಸಗಿ ಸಂಸ್ಥೆ/ಬಹು ರಾಷ್ಟ್ರೀಯ ಕಂಪನಿಗಳು ವಸತಿ ಮತ್ತು ಉದ್ಯೋಗವನ್ನು ಒಂದೇ ಜಾಗದಲ್ಲಿ ಕಲ್ಪಿಸಲು ಮುಂದಾದಲ್ಲಿ ಕನಿಷ್ಟ 40 ಹೆಕ್ಟೇರ್ ಪ್ರದೇಶವನ್ನು ನಿಗದಿಪಡಿಸಿ ನಿಯಮಾವಳಿಗಳನ್ನು ರೂಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ರಸ್ತೆಗಳಲ್ಲಿ ಉಂಟಾಗುವ ವಾಹನ ದಟ್ಟಣೆಯನ್ನು ಕಡಿಮೆಗೊಳಿಸಬಹುದು, ಮಾಲಿನ್ಯ ನಿಯಂತ್ರಣ ಮತ್ತು ಸಮಯವನ್ನು ಕೂಡ ಉಳಿಸಬಹುದಾಗಿರುತ್ತದೆ.